# ಕಾರ್ಯಕ್ರಮಗಳ ವರದಿ ಫೆಬ್ರವರಿ- 2023

**02.02.2023: ಬೆಂಗಳೂರಿನ ಎನ್‌ಯು ಆಸ್ಪತ್ರೆಯಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ಬೆಂಗಳೂರಿನ ಪದ್ಮನಾಭ ನಗರದ ಎನ್‌ಯು ಆಸ್ಪತ್ರೆಯಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಜೀವಸಾರ್ಥಕತೆಯ ಕಸಿ ಸಂಯೋಜಕರಾದ ಶ್ರೀ ನೌಷಾದ್ ಪಾಷ, ಶ್ರೀ ಚೂಡೇಶ್, ಮತ್ತು ಶ್ರೀ ಚೇತನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಎನ್‌ಯು ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ದಿಲೀಪ್ ರಂಗನಾಥ್ ಕಾರ್ಯಕ್ರಮವನ್ನು ಉದ್ಘಾಟಿಸಿ ಅಂಗಾಂಗ ದಾನದ ಮಹತ್ವ, ಅಂಗಾಂಗ ವೈಫಲ್ಯದ ಕಾರಣಗಳು ಮತ್ತು ನಮ್ಮ ಜೀವನ ಶೈಲಿಯು ಅದರ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದರ ಕುರಿತು ಮಾತನಾಡಿದರು. ಶ್ರೀ ಚೇತನ್ ಕುಮಾರ್ ಅವರು ಅಂಗಾಂಗ ದಾನದ ಕುರಿತು ಪಿಪಿಟಿ ಪ್ರಸ್ತುತ ಪಡಿಸಿದರು. ಶ್ರೀ ನೌಶಾದ್ ಪಾಷಾ ಅವರು ಜೀವಸಾರ್ಥಕಥೆಯ ಪಾತ್ರ ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿ ಹಂಚಿಕೊಂಡರು. ಎನ್‌ಯು ಆಸ್ಪತ್ರೆಯ 200 ಕ್ಕೂ ಹೆಚ್ಚು ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸುಮಾರು 150 ಜನರು ಮುಂದೆ ಬಂದು ಅಂಗಾಂಗ ದಾನಕ್ಕೆ ವಾಗ್ದಾನ ಮಾಡಿದರು.

















**03.02.2022: ಮಂಗಳೂರಿನ ವೆನ್ಲಾಕ್ ಆಸ್ಪತ್ರೆ ಗ್ರಂಥಾಲಯದಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ಮಂಗಳೂರಿನ ರೆಡ್‌ಕ್ರಾಸ್ ಸೊಸೈಟಿಯು ವೆನ್ಲಾಕ್ ಆಸ್ಪತ್ರೆಯಲ್ಲಿ ರೋಶನಿ ವಿದ್ಯಾರ್ಥಿಗಳಿಗೆ ಅಂಗಾಂಗ ದಾನದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ ಜೀವಸಾರ್ಥಕತೆ/ ಸೊಟ್ಟೋ ಕರ್ನಾಟಕ ಮಂಗಳೂರು ವಲಯದ ಕಸಿ ಸಂಯೋಜಕಿ ಶ್ರೀಮತಿ ಪದ್ಮಾ ಭಾಗವಹಿಸಿ ಅಂಗಾಂಗ ದಾನದ ಅಗತ್ಯತೆ ಮತ್ತು ಮಹತ್ವ, ಮಿದುಳು ನಿಷ್ಕ್ರಿಯತೆಯ ಪರಿಕಲ್ಪನೆ ಹಾಗೂ ಅಂಗಾಂಗ ದಾನದ ಪ್ರತಿಜ್ಞೆಯ ಮಹತ್ವವನ್ನು ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಸುಮಾರು 15 ಸದಸ್ಯರು ಭಾಗವಹಿಸಿದ್ದರು ಮತ್ತು 4 ವಿದ್ಯಾರ್ಥಿಗಳು ಅಂಗಾಂಗ ದಾನಕ್ಕೆ ಪ್ರತಿಜ್ಞೆ ಮಾಡಿದರು.






**06.02.2023: ಕೇರಳದ ತಿರುವನಂತಪುರದಲ್ಲಿ BMST ಕಾರ್ಯಕ್ರಮ:** ಮೂತ್ರಪಿಂಡಗಳ ಕ್ರಾಸ್-ಮ್ಯಾಚ್‌ಗಾಗಿ ಕೇಂದ್ರೀಕೃತ ಪರೀಕ್ಷಾ ಸೌಲಭ್ಯವನ್ನು ಸ್ಥಾಪಿಸುವ ಸಾಧ್ಯತೆಯನ್ನು ಚರ್ಚಿಸಲು ಕೇರಳ SOTTO ವು ಶ್ರೀಮತಿ ಲಿಜಾಮೋಲ್ ಜೋಸೆಫ್ ಜೀವಸಾರ್ಥಕಥೆ/ SOTTO ಕರ್ನಾಟಕದ ಮುಖ್ಯ ಕಸಿ ಸಂಯೋಜಕರನ್ನು ವಿಷಯ ತಜ್ಞರಾಗಿ ಸಭೆಗೆ ಆಹ್ವಾನಿಸಲಾಗಿತ್ತು. ಕೇರಳ -ಸೊಟ್ಟೋದ ನೋಡಲ್ ಅಧಿಕಾರಿ ಡಾ. ನೋಬಲ್ ಗ್ರೇಶಿಯಸ್ ಈ ಸಭೆಯನ್ನು ಆಯೋಜಿಸಿದ್ದರು. ಬೆಂಗಳೂರು ಮೆಡಿಕಲ್ ಟ್ರಸ್ಟ್‌ನ ಡಾ. ಲತಾ ಜಗದ್ನಾಥನ್ ಮತ್ತು ಡಾ. ಅಂಕಿತ್ ಮಾಥುರ್ ಅವರು ಪ್ರಸ್ತುತ ಇರುವ ಸಿಬ್ಬಂದಿಗಳಿಗೆ ಪ್ರಾಯೋಗಿಕ ತರಬೇತಿ ಮತ್ತು ಮಾರ್ಗದರ್ಶನ ನೀಡುವ ಸಾಧ್ಯತೆಯ ಕುರಿತು ಚರ್ಚಿಸಿದರು. ಸಭೆಯು ತಿರುವನಂತಪುರ ವೈದ್ಯಕೀಯ ಕಾಲೇಜು ಆಸ್ಪತ್ರೆಯ ಸೌಲಭ್ಯಗಳ ಅವಲೋಕನದೊಂದಿಗೆ ಮುಕ್ತಾಯಗೊಂಡಿತು.







**07.02.2023: ಬೆಂಗಳೂರಿನ ದರ್ಶನ್ ಮೆಡಿಕೇರ್ ಮತ್ತು ವೃದ್ಧಾಶ್ರಮದಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ಎನೇಬಲ್ ಇಂಡಿಯಾ ಎನ್‌ಜಿಒ ವಿದ್ಯಾರ್ಥಿಗಳ ಸಹಯೋಗದಲ್ಲಿ ದರ್ಶನ್ ಮೆಡಿಕೇರ್ ಮತ್ತು ವೃದ್ಧಾಶ್ರಮದಲ್ಲಿ ಜಾಗೃತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಜೀವಸಾರ್ಥಕತೆಯ ಕಸಿ ಸಂಯೋಜಕಿ ಶ್ರೀಮತಿ ಶೋಭಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅಂಗಾಂಗ ದಾನ ಮತ್ತು ಅಂಗಾಂಗ ದಾನದ ಪ್ರತಿಜ್ಞೆಯ ಮಹತ್ವವನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ 20 ಸದಸ್ಯರು ಭಾಗವಹಿಸಿದ್ದರು, ಮತ್ತು 5 ಜನ ಅಂಗಾಂಗ ದಾನಕ್ಕೆ ಪ್ರತಿಜ್ಞೆ ಮಾಡಿದರು.




**08.02.2023: ಬೆಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ ಯುವಜನೋತ್ಸವದಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ಪದವಿ ಪೂರ್ವ ಶಿಕ್ಷಣ ಇಲಾಖೆ, ರಾಷ್ಟ್ರೀಯ ಸೇವಾ ಯೋಜನೆ, ಭಾರತ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾಕೂಟದ ಸಹಯೋಗದಲ್ಲಿ ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆದ ರಾಜ್ಯ ಮಟ್ಟದ ಯುವಜನೋತ್ಸವದಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಜೀವಸಾರ್ಥಕತೆಯ ಅಂಗಾಂಗ ಕಸಿ ಸಂಯೋಜಕರಾದ ಶ್ರೀ ಚೇತನ್ ಮತ್ತು ಶ್ರೀ ಶ್ರೀನಿವಾಸ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶ್ರೀ ಚೇತನ್ ಅವರು ಅಂಗಾಂಗ ದಾನದ ಕುರಿತು ಪಿಪಿಟಿಯನ್ನು ಪ್ರಸ್ತುತಪಡಿಸಿದರು ಮತ್ತು ಶ್ರೀ ಶ್ರೀನಿವಾಸ್ ಅವರು ಜೀವಸಾರ್ಥಕಥೆ ಮತ್ತು ಅಂಗಾಂಗ ದಾನದ ಮಹತ್ವದ ಕುರಿತು ಮಾಹಿತಿ ಹಂಚಿಕೊಂಡರು. ಕಾರ್ಯಕ್ರಮದಲ್ಲಿ 150 ಕ್ಕೂ ಹೆಚ್ಚು ಎನ್ಎಸ್ಎಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು ಮತ್ತು 30 ಮಂದಿ ಅಂಗಾಂಗ ದಾನಕ್ಕೆ ಪ್ರತಿಜ್ಞೆ ಮಾಡಿದರು.














**09.02.2022: ಮಂಗಳೂರಿನ ಎಸ್‌ಡಿಎಂ ಕಾನೂನು ಕಾಲೇಜಿನಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ಮಂಗಳೂರಿನ ಎಸ್‌ಡಿಎಂ ಕಾನೂನು ಕಾಲೇಜು, ಎ.ಜೆ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಸಹಯೋಗದೊಂದಿಗೆ ಕಾಲೇಜಿನ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳಿಗೆ ಅಂಗಾಂಗ ದಾನದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಎಸ್‌ಡಿಎಂ ಕಾನೂನು ಕಾಲೇಜು ಮಂಗಳೂರಿನಲ್ಲಿ ಆಯೋಜಿಸಲಾಗಿತ್ತು. ಎ.ಜೆ ಆಸ್ಪತ್ರೆಯ ಎಂಡಿ ಡಾ.ಪ್ರಶಾಂತ್ ಮಾರ್ಲ ಅವರು ಅಂಗಾಂಗ ದಾನದ ಅಗತ್ಯತೆ ಮತ್ತು ಪ್ರಾಮುಖ್ಯತೆಗಳು, ಮೆದುಳು ಸಾವಿನ ಪರಿಕಲ್ಪನೆ ಮತ್ತು ಅಂಗಾಂಗ ದಾನದ ಪ್ರತಿಜ್ಞೆಯ ಮಹತ್ವದ ಕುರಿತು ಪಿಪಿಟಿಯನ್ನು ಪ್ರಸ್ತುತಪಡಿಸಿದರು. ಜೀವನ ವಿಲೀನ ಹೆಸರಿನ ಅಂಗಾಂಗ ದಾನದ ಕಿರುಚಿತ್ರವನ್ನು ವಿದ್ಯಾರ್ಥಿಗಳಿಗೆ ಪ್ರದರ್ಶಿಸಲಾಯಿತು. ಜೀವಸಾರ್ಥಕಥೆ/ SOTTO ಕರ್ನಾಟಕದಿಂದ ಶ್ರೀಮತಿ ಪದ್ಮಾ ಕಸಿ ಸಂಯೋಜಕಿ ಅಂಗಾಂಗ ದಾನದ ಪ್ರತಿಜ್ಞೆಯ ಮಹತ್ವವನ್ನು ವಿವರಿಸಿದರು. ಕಾರ್ಯಕ್ರಮದಲ್ಲಿ ಎಸ್‌ಡಿಎಂ ಕಾನೂನು ಕಾಲೇಜಿನ ಪ್ರಾಂಶುಪಾಲರು ಹಾಗೂ ಎ.ಜೆ.ಆಸ್ಪತ್ರೆಯ ಕಸಿ ಸಂಯೋಜಕಿ ಸೌಮ್ಯಾ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಸುಮಾರು 200 ವಿದ್ಯಾರ್ಥಿಗಳು ಭಾಗವಹಿಸಿದ್ದರು ಮತ್ತು 18 ವಿದ್ಯಾರ್ಥಿಗಳು ಅಂಗಾಂಗ ದಾನಕ್ಕೆ ಪ್ರತಿಜ್ಞೆ ಮಾಡಿದರು.









**11.02.2023: ಬೆಂಗಳೂರಿನಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ಶ್ರೀ ಸಾಯಿ ರಾಮ್ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ. ಗೀತಾ ಅವರು ತಮ್ಮ ಚಿಕ್ಕಮ್ಮನ ಮರಣ ಶೋಕ ಸಭೆಯಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿಸಿದ್ದರು. ಕಾರ್ಯಕ್ರಮದಲ್ಲಿ ಜೀವಸಾರ್ಥಕಥೆಯ ಕಸಿ ಸಂಯೋಜಕಿ ಶ್ರೀಮತಿ ಚಂದ್ರಕಲಾ ಭಾಗವಹಿಸಿ ಅಂಗಾಂಗ ದಾನ ಹಾಗೂ ಅಂಗಾಂಗ ದಾನದ ಪ್ರತಿಜ್ಞೆ ಕುರಿತು ವಿವರ ಹಂಚಿಕೊಂಡರು. ಕಾರ್ಯಕ್ರಮದಲ್ಲಿ 50ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. 15 ಜನ ಅಂಗಾಂಗ ದಾನಕ್ಕೆ ವಾಗ್ದಾನ ಮಾಡಿದರು.







**12.02.2023: ಚೆನ್ನೈನಲ್ಲಿ ಸಜೀವ ಅಂಗಾಂಗ ದಾನವನ್ನು ಸುಧಾರಿಸುವ ಕುರಿತು ಒಂದು ದಿನದ ಕಾರ್ಯಾಗಾರ:** ಮೋಹನ್ ಫೌಂಡೇಶನ್‌ನಿಂದ ಅಬು ಸರೋವರ್ ಪೋರ್ಟಿಕೋ ಕಿಲ್ಪಾ ಚೆನ್ನೈನಲ್ಲಿ ನೈತಿಕ ಸಜೀವ ಅಂಗಾಂಗ ದಾನವನ್ನು ಉತ್ತೇಜಿಸಲು ಮತ್ತು ಅಂಗಾಂಗ ದಾನಿಗಳ ಸಂಖ್ಯೆಯನ್ನು ಹೆಚ್ಚಿಸುವ ಹಾಗೂ ಇದರಿಂದ ಗರಿಷ್ಠ ಸಂಖ್ಯೆಯ ಜೀವಗಳನ್ನು ಉಳಿಸಬಹುದಾದ ಮಾರ್ಗಗಳನ್ನು ಅನ್ವೇಷಿಸಲು ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಜೀವಸಾರ್ಥಕಥೆ/ SOTTO ಕರ್ನಾಟಕದಿಂದ ಶ್ರೀಮತಿ ಲಿಜಾಮೋಲ್ ಜೋಸೆಫ್ ಮುಖ್ಯ ಕಸಿ ಸಂಯೋಜಕರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಕಾರ್ಯಾಗಾರದಲ್ಲಿ ಚರ್ಚಿಸಲಾದ ವಿಷಯಗಳು,

1. ಸಜೀವ ಅಂಗಾಂಗ ದಾನಗಳಿಗಾಗಿ ವಿಶೇಷ ನಿಯಮಗಳು

2. ಸಾಮಾಜಿಕ ಮಾಧ್ಯಮ ಮತ್ತು ಸಜೀವ ಅಂಗಾಂಗ ದಾನ

3. ಅನಿರ್ದೇಶಿತ ಪರೋಪಕಾರದ ಅಂಗಾಂಗ ದಾನ

4. ಬಲವಂತ ಮುಕ್ತವಾದ ಸಜೀವ ಅಂಗಾಂಗ ದಾನ

5. ಸ್ವತಂತ್ರ ಸಜೀವ ಅಂಗಾಂಗ ದಾನ ಪ್ರತಿಪಾದನೆ ವಹಿಸುವ ಪಾತ್ರ

6. ಸಜೀವ ಅಂಗಾಂಗ ದಾನಿಗಳು ಮತ್ತು ಸ್ವೀಕರಿಸುವವರನ್ನು ಬೆಂಬಲಿಸಲು ಆರೋಗ್ಯ ವಿಮೆ



**14.02.2023: ಧಾರವಾಡದ ಜಿಲ್ಲಾ ಹೆರಿಗೆ ಆಸ್ಪತ್ರೆಯ ವಾರ್ಡ್ ನಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ಧಾರವಾಡದ ಜಿಲ್ಲಾ ಹೆರಿಗೆ ಆಸ್ಪತ್ರೆಯ ವಾರ್ಡ್ ನಲ್ಲಿ ನಡೆದ ಅಂಗಾಂಗ ದಾನದ ಜಾಗೃತಿ ಕಾರ್ಯಕ್ರಮದಲ್ಲಿ ಶ್ರೀ ಮನೋಜ ನಾಯಕ ಜೀವಸಾರ್ಥಕತೆ ಹುಬ್ಬಳ್ಳಿ ವಿಭಾಗದ ಅಂಗಾಂಗ ಕಸಿ ಸಂಯೋಜಕರು ಭಾಗವಹಿಸಿ ಅಂಗಾಂಗದಾನದ ಮಹತ್ವದ ಕುರಿತು ಅರಿವು ಮೂಡಿಸಿದರು. 20 ಕ್ಕೂ ಹೆಚ್ಚು ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.





**14.02.2022: ಬಂಟ್ವಾಳ ತಾಲೂಕಿನ ರಾಯಿ ಪಂಚಾಯತ್‌ನಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ಬಂಟ್ವಾಳ ತಾಲೂಕಿನ ರಾಯಿ ಗ್ರಾಮಪಂಚಾಯತ್‌ನಲ್ಲಿ ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರದ ವತಿಯಿಂದ ಆಯುಷ್ಮಾನ್ ಭಾರತ್ ಮತ್ತು ಅಂಗಾಂಗ ದಾನದ ಕುರಿತು ಸಾರ್ವಜನಿಕರಿಗೆ ಹಾಗೂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಜೀವಸಾರ್ಥಕಥೆ/ SOTTO ಕರ್ನಾಟಕದ ಅಂಗಾಂಗ ಕಸಿ ಸಂಯೋಜಕಿ ಶ್ರೀಮತಿ ಪದ್ಮಾ ಅಂಗಾಂಗ ದಾನದ ಅಗತ್ಯತೆಗಳು ಮತ್ತು ಪ್ರಾಮುಖ್ಯತೆ, ಮೆದುಳು ಸಾವಿನ ಪರಿಕಲ್ಪನೆಯ ಬಗ್ಗೆ ಮಾಹಿತಿ ಹಂಚಿಕೊಂಡರು. ಜೀವಸಾರ್ಥಕಥೆ/SOTTO ಕರ್ನಾಟಕದ ಮತ್ತೊಬ್ಬ ಕಸಿ ಸಂಯೋಜಕಿ ಶ್ರೀಮತಿ ಲವೀನಾ ಅಂಗಾಂಗ ದಾನದ ಪ್ರತಿಜ್ಞೆಯ ಮಹತ್ವವನ್ನು ವಿವರಿಸಿದರು.

ಆಯುಷ್ಮಾನ್ ಭಾರತ್‌ನ ಜಿಲ್ಲಾ ಸಂಯೋಜಕಿ ಡಾ.ಯಶಸ್ವಿನಿ ಆಯುಷ್ಮಾನ್ ಭಾರತ್ ಯೋಜನೆಗಳನ್ನು ವಿವರಿಸಿದರು. ಗ್ರಾ.ಪಂ ಅಧ್ಯಕ್ಷರು, ಪಿಡಿಒ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಸುಮಾರು 150 ಸದಸ್ಯರು ಭಾಗವಹಿಸಿದ್ದರು ಮತ್ತು 18 ವಿದ್ಯಾರ್ಥಿಗಳು ಅಂಗಾಂಗ ದಾನಕ್ಕೆ ಪ್ರತಿಜ್ಞೆ ಮಾಡಿದರು.






**15.02.2023 ಎನೇಬಲ್ ಇಂಡಿಯಾ ಎನ್‌ಜಿಒ ಕೋರಮಂಗಲದಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ ಬೆಂಗಳೂರು:** ಎನೇಬಲ್ ಇಂಡಿಯಾ ಎನ್‌ಜಿಒದಲ್ಲಿ ಎನ್‌ಜಿಒ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಕ್ರಮವನ್ನು ನಡೆಸಲಾಯಿತು, ಜೀವಸಾರ್ಥಕತೆಯ ಅಂಗಾಂಗ ಕಸಿ ಸಂಯೋಜಕಿ ಶ್ರೀಮತಿ ಶೋಭಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅಂಗಾಂಗ ದಾನದ ಮಹತ್ವವನ್ನು ಹಂಚಿಕೊಂಡರು. ಅಂಗಾಂಗ ದಾನಕ್ಕೆ ವಾಗ್ದಾನ ಮಾಡಿದ ಎನ್‌ಜಿಒಗೆ ಸಂಬಂಧಿಸಿದ ಕೆಲವು ಅಂಧ ವಿದ್ಯಾರ್ಥಿಗಳು ಸೇರಿದಂತೆ 50 ಕ್ಕೂ ಹೆಚ್ಚು ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.





**20.02.2023: ಧಾರವಾಡದ ಜಿಲ್ಲಾ ಹೆರಿಗೆ ಆಸ್ಪತ್ರೆಯ ವಾರ್ಡ್ ನಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ಧಾರವಾಡದ ಜಿಲ್ಲಾ ಹೆರಿಗೆ ಆಸ್ಪತ್ರೆಯ ನೆಲ ಮಹಡಿಯ ವಾರ್ಡ್ ನಲ್ಲಿ ನಡೆದ ಜಾಗೃತಿ ಕಾರ್ಯಕ್ರಮದಲ್ಲಿ ಶ್ರೀ ಮನೋಜ ನಾಯಕ ಜೀವಸಾರ್ಥಕತೆ ಹುಬ್ಬಳ್ಳಿ ವಿಭಾಗದ ಅಂಗಾಂಗ ಕಸಿ ಸಂಯೋಜಕರು ಭಾಗವಹಿಸಿ ಅಂಗಾಂಗದಾನದ ಮಹತ್ವದ ಕುರಿತು ಅರಿವು ಮೂಡಿಸಿದರು. 20 ಕ್ಕೂ ಹೆಚ್ಚು ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.





**20.02.2023: ಬೆಂಗಳೂರಿನ ಕ್ರಿಸ್ತು ಜಯಂತಿ ಕಾಲೇಜಿನಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:**
ಸಮಾಜಕಾರ್ಯ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಮತ್ತು ಎನ್‌ಎಸ್‌ಎಸ್ ಸ್ವಯಂಸೇವಕರಿಗೆ ಪರಿಣಿತ ಉಪನ್ಯಾಸ ಸರಣಿಯ ಅಂಗವಾಗಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮವನ್ನು ಕ್ರಿಸ್ತು ಜಯಂತಿ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಜೀವಸಾರ್ಥಕಥೆಯ ಮುಖ್ಯ ಸಂಯೋಜಕರಾದ ಶ್ರೀಮತಿ ಲೀಜಾಮೋಲ್ ಜೋಸೆಫ್ ಅವರನ್ನು ಅಂಗಾಂಗ ದಾನದಲ್ಲಿ ವೃತ್ತಿಪರ ಸಮಾಜ ಸೇವಕರ ಪಾತ್ರದ ಕುರಿತು ಪರಿಣಿತ ಉಪನ್ಯಾಸ ಮತ್ತು ಪ್ರಶ್ನೋತ್ತರ ಸರಣಿಗಾಗಿ ಸಂಪನ್ಮೂಲ ವ್ಯಕ್ತಿಯಾಗಿ ಆಹ್ವಾನಿಸಲಾಗಿತ್ತು. ಕಾರ್ಯಕ್ರಮದಲ್ಲಿ ರೆಡ್‌ಕ್ರಾಸ್‌ನ ವಿದ್ಯಾರ್ಥಿಗಳು ಸೇರಿದಂತೆ ಸುಮಾರು 350 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳು ಅಂಗಾಂಗ ದಾನದ ರಾಯಭಾರಿಗಳಾಗಲು ಪ್ರತಿಜ್ಞೆ ಮಾಡಿದರು.











**21.02.2023: ಧಾರವಾಡದ ಜಿಲ್ಲಾ ಹೆರಿಗೆ ಆಸ್ಪತ್ರೆಯಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ಧಾರವಾಡದ ಜಿಲ್ಲಾ ಹೆರಿಗೆ ಆಸ್ಪತ್ರೆಯ ಆಸ್ಪತ್ರೆ ಪ್ರವೇಶ ದ್ವಾರದಲ್ಲಿ ನಡೆದ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮದಲ್ಲಿ ಶ್ರೀ ಮನೋಜ ನಾಯಕ ಜೀವಸಾರ್ಥಕತೆ ಹುಬ್ಬಳ್ಳಿ ವಿಭಾಗದ ಅಂಗಾಂಗ ಕಸಿ ಸಂಯೋಜಕರು ಭಾಗವಹಿಸಿ ಅಂಗಾಂಗ ಕಸಿ ಮತ್ತು ಅಂಗಾಂಗ ದಾನದ ಮಹತ್ವದ ಕುರಿತು ಅರಿವುಮೂಡಿಸಿದರು. ಕಾರ್ಯಕ್ರಮದಲ್ಲಿ 20 ಮಂದಿ ಭಾಗವಹಿಸಿದ್ದರು.






**22.02.2023: ಧಾರವಾಡದಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ:** ಸಿ.ಎಚ್.ಓ ತರಬೇತಿ ಕೇಂದ್ರ ಜಿಲ್ಲಾ ಆಸ್ಪತ್ರೆ ಧಾರವಾಡದಲ್ಲಿ ನಡೆದ ಜಾಗೃತಿ ಕಾರ್ಯಕ್ರಮದಲ್ಲಿ ಶ್ರೀ ಮನೋಜ ನಾಯಕ

ಜೀವಸಾರ್ಥಕತೆ ಹುಬ್ಬಳ್ಳಿ ವಿಭಾಗದ ಅಂಗಾಂಗ ಕಸಿ ಸಂಯೋಜಕರು ಭಾಗವಹಿಸಿ ಅಂಗಾಂಗದಾನದ ಮಹತ್ವದ ಕುರಿತು ಅರಿವುಮೂಡಿಸಿದರು. ಕಾರ್ಯಕ್ರಮದಲ್ಲಿ 50 ಮಂದಿ ಭಾಗವಹಿಸಿದ್ದರು.





**24.02.2023: ಸಿಂಧನೂರಿನಲ್ಲಿ ಯ್ರಾಲಿ ಮತ್ತು ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮ ನಡೆಸುವ ಕುರಿತು ಪೂರ್ವಭಾವಿ ಸಭೆ:** ವಿಶ್ವ ಕಿಡ್ನಿ ದಿನಾಚರಣೆಯ ಕುರಿತು ಪೂರ್ವಭಾವಿ ಸಭೆಯನ್ನು ಸಿಂಧನೂರು ಐಬಿಯಲ್ಲಿ ನಡೆಸಲಾಯಿತು. ಜೀವಸಾರ್ಥಕಥೆ/ SOTTO ಕರ್ನಾಟಕದಿಂದ ಶ್ರೀ ಶೇಕಪ್ಪ ಕಟ್ಟೀಮನಿ ಅಂಗಾಂಗ ಕಸಿ ಸಂಯೋಜಕರು ಸಭೆಯಲ್ಲಿ ಪಾಲ್ಗೊಂಡು ಮತ್ತು ಅಂಗಾಂಗ ದಾನ ಕುರಿತು ಜಾಥಾ ಮತ್ತು ಪ್ರತಿಜ್ಞೆ ಶಿಬಿರವನ್ನು ನಡೆಸುವ ಕುರಿತು ಚರ್ಚಿಸಿದರು. ಸಭೆಯಲ್ಲಿ ಸಿಪಿಎಂ ಸಂಘಟನೆಯ ಸದಸ್ಯರು, ಸುದ್ದಿ ಇಲೆಕ್ಟ್ರಾನಿಕ್ ಮಾಧ್ಯಮ ಮುಖ್ಯಸ್ಥ ಶ್ರೀ ದೇವಿಂದ್ರ, ಗ್ರೀನ್ ರಾಯಚೂರು ಸಂಘಟನೆಯ ಶ್ರೀ ರಾಜೇಸ್ವ್ರ ಶಿವಾಳೆ, ಹಾಗೂ ಯುವ ಒಕ್ಕೂಟದ ಅಧ್ಯಕ್ಷರು ಉಪಸ್ಥಿತರಿದ್ದರು.






**28.02.2023: ಬೆಂಗಳೂರಿನ ಪ್ರಾದೇಶಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ತರಬೇತಿ ಕೇಂದ್ರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಇಂಡಕ್ಷನ್ ತರಬೇತಿ:** ಹೊಸದಾಗಿ ನೇಮಕಗೊಂಡ 3ನೇ ಬ್ಯಾಚ್ ವೈದ್ಯಾಧಿಕಾರಿಗಳಿಗೆ ಪ್ರಾದೇಶಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಕೇಂದ್ರ ಆರೋಗ್ಯ ಸೌಧ ಗೇಟ್‌ನಲ್ಲಿ 21 ದಿನಗಳ ಪ್ರವೇಶ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಜೀವಸಾರ್ಥಕಥೆ/ SOTTO ಕರ್ನಾಟಕದ ಮುಖ್ಯ ಅಂಗಾಂಗ ಕಸಿ ಸಂಯೋಜಕರಾದ ಶ್ರೀಮತಿ ಲಿಜಾಮೋಲ್ ಜೋಸೆಫ್ ಅವರನ್ನು

“ಕರ್ನಾಟಕದಲ್ಲಿ ಅಂಗದಾನ ಪ್ರಕ್ರಿಯೆಯ ಹರಿವು” ಕುರಿತು ಮಾತನಾಡಲು ವಿಷಯ ತಜ್ಞರಾಗಿ ಆಹ್ವಾನಿಸಿದ್ದರು. ಸುಮಾರು 30 ತರಬೇತಿ ಅಧಿಕಾರಿಗಳು ಅಧಿವೇಶನದಲ್ಲಿ ಭಾಗವಹಿಸಿದ್ದರು.

